# ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗಾಜನೂರು ಅಗ್ರಹಾರ.ಶಿವಮೊಗ್ಗ:ತಾ


**ತರಗತಿ:1** | **ವಿಷಯ: ಕನ್ನಡ** | **ಮಾರ್ಗದರ್ಶಕರು:ಶ್ರೀ ಸೋಮಲಿಂಗಪ್ಪ ಜೆ**

**ಈ ಪದ್ಯವನ್ನು ಅಭಿನಯದೊಂದಿಗೆ ರಾಗವಾಗಿ ಹಾಡಿರಿ :**

## ಬಣ್ಣದ ತಗಡಿನ ತುತ್ತೂರಿ

**ನನ್ನನ್ನು ಕ್ಲಿಕ್ಕಿಸಿ :-**





5 | ಹಾಡು | 100

ಸೂಚನೆ : ಈ ಹಾಡನ್ನು ಅಭಿನಯದೊಂದಿಗೆ ರಾಗಬದ್ಧವಾಗಿ ಹೇಳುವುದು ಮಕ್ಕಳು ಅದನ್ನು ಅನುಕರಿಸುವುದು.

### ''ಬಣ್ಣದ ತಗಡಿನ ತುತ್ತೂರಿ''

ಬಣ್ಣದ ತಗಡಿನ ತುತ್ತೂರಿ
ಕಾಸಿಗೆ ಕೊಂಡನು ಕಸ್ತೂರಿ
ಸರಿಗಮ ಪದನಿಸ ಊದಿದನು
ಸನಿದಪ ಮಗರಿಸ ಊದಿದನು.

ತನಗೆ ತುತ್ತೂರಿ ಇದೆ ಎಂದು
ಬೇರಾರಿಗೂ ಅದು ಇಲ್ಲೆಂದು
ಕಸ್ತೂರಿ ನಡೆದನು ಬೀದಿಯಲಿ
ಜಂಭದ ಕೋಳಿಯ ರೀತಿಯಲಿ.

ತುತ್ತೂರಿ ಊದುತ ಕೊಳದ ಬಳಿ
ನಡೆದನು ಕಸ್ತೂರಿ ಸಂಜೆಯಲಿ
ಜಾರಿತು ನೀರಿಗೆ ತುತ್ತೂರಿ
ಗಂಟಲು ಕಟ್ಟಿತು ನೀರೂರಿ

ಸರಿಗಮ ಊದಲು ನೋಡಿದನು
ಗ,ಗ,ಗ,ಗ, ಸದ್ದನು ಮಾಡಿದನು
ಬಣ್ಣವು ನೀರಿನ ಪಾಲಾಯ್ತು
ಬಣ್ಣದ ತುತ್ತೂರಿ ಬೋಳಾಯ್ತು
ತುತ್ತೂರಿ ಬಣ್ಣವು ಹಾಳಾಯ್ತು
ಜಂಭದ ಕೋಳಿಗೆ ಗೋಳಾಯ್ತು.

LIVEWORKSHEETS